**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 118/2017** ಸಿ.ಡಬ್ಲ್ಯೂ -3

ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | ಃ | ಮಲ್ಲಪ್ಪ |
| ತಂದೆಃಗಂಡ | ಃ | ಮರೆಪ್ಪ |
| ವಯಸ್ಸು | ಃ | 71 ವರ್ಷ |
| ಉದ್ಯೋಗ | ಃ | ನಿವೃತ್ತ ಪಿಎಸಐ, ಅಬಕಾರಿ ಇಲಾಖೆ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ17.10.2023

ಸತ್ಯ ಪ್ರತಿಜ್ಞೆಯ ಮೇರೆಗೆ.

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು 2012 ರಿಂದ 2013 ಆಳಂದ ಅಬಕಾರಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ದಿ. 21.05.2012 ರಂದುಸಂಜೆ 5.30 -6.00 ಗಂಟೆ ಸುಮಾರಿಗೆ ಒಂದು ಬಾತ್ಮಿ ಬಂದಿರುತ್ತದೆ ಆಳಂದ ತಾಲೂಕಿನ ಪಡಸಾವಳಗಿ ಗ್ರಾಮದಲ್ಲಿ ಅಕ್ರಮವಾಗಿ ಕಳ್ಳಬಟ್ಟಿ ಸರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದ ಪ್ರಯುಕ್ತ ನಾನು ನನ್ನ ಸಿಬ್ಬಂದಿಗಳಿಗೆ ಇಬ್ಬರು ಪಂಚರನ್ನು ಕರೆಯಿಸಿ ಪಂಚರನ್ನು ಅಬಕಾರಿ ದಾಳಿ ಪ್ರಯುಕ್ತ ಸಹಕರಿಸಬೇಕೆಂದು ಕೋರಿಕೊಂಡಾಗ ಅವರು ಒಪ್ಪಿಕೊಂಡಿದ್ದು ನಂತರ ಸಿಬ್ಬಂದಿ ಹಾಗೂ ಪಂಚರೊಂದಿಗೆ ವಾಹನ ಸಂಖ್ಯೆ 479 ರಲ್ಲಿ ಪಡಸಾವಳಗಿ ಗ್ರಾಮಕ್ಕೆ ಹೋಗಿ ಶೋಧನೆ ಮಾಡಿದಾಗ ಜನರ ಗುಂಪು ಸೇರಿಕೊಂಡಿತ್ತು ನಮ್ಮನ್ನು ನೋಡಿ ಜನರು ಓಡಿ ಹೋದರು ಒಬ್ಬರು ಉಳಿದುಕೊಂಡರು. ಅವನನ್ನು ವಿಚಾರಣೆ ಮಾಡಿದಾಗ ಎರಡು ಪ್ಲಾಸ್ಟಿಕ ಬ್ಯಾಗಗಳನ್ನು ಮುಳ್ಳಿನ ಕಂಟಿಯಲ್ಲಿ ಮುಚ್ಚಲು ಪ್ರಯತ್ನಿಸಿದನು. ನಮಗೆ ಅನುಮಾನ ಬಂದು ಪರಿಶೀಲಿಸಿದಾಗ ಬಿಳಿ ಬಣ್ಣದ ದ್ರವ ಕಂಡು ಬಂದಿದ್ದು, ಅತನನ್ನು ವಿಚಾರಿಸಿದಾಗ ಕಳ್ಳಬಟ್ಟಿ ಸರಾಯಿ ಎಂದು ಒಪ್ಪಿಕೊಂಡಿರುತ್ತಾನೆ ನಂತರ ಅವನ ಹೆಸರು ವಿಚಾರಿಸಲಾಗಿ ಅಶೋಕ ತಂದೆ ಅಂಬಾಜಿ ಎಂದು ಹೇಳಿರುತ್ತಾನೆ. ನಂತರ 4 ಬಾಟಲಗಳನ್ನು ರಾಸಾಯನಿಕ ಪರಿಕ್ಷೆಗೆ ತೆಗೆದು ಬಟ್ಟೆ ಸುತ್ತಿ ದಾರದಿಂದ ಕಟ್ಟಿ 415 ಎಂದು ಸೀಲ್ ಮಾಡಲಾಯಿತು. ಆರೋಪಿಯನ್ನು ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ನೀಡಿರುತ್ತೇನೆ. ಜಪ್ತಿ ಪಡಿಸಿಕುಂಡ ಮಾಲನ್ನು ಕಚೇರಿಗೆ ತೆಗೆದುಕೊಂಡು ಬಂದು 4 ಬಾಟಲಗಳನ್ನು ರಾಸಾಯನಿಕ ಪರಿಕ್ಷೆಗೆ ತೆಗೆದು ತನಿಖೆಗಾಗಿ ಕಡತವನ್ನು ಹಸ್ತಾಂತರಿಸಿದೇನು. ಒಂದು ಶೋಧನಾ ಪತ್ರವನ್ನು ತಯಾರಿಸಿರುತ್ತೇನೆ. ಆರೋಪಿ ಸಂಬಂಧಿಕರಿಗೆ ವಿಚಾರವನ್ನು ತಿಳಿಸಿರುತ್ತೇನೆ.

ಸಾಕ್ಷಿಗೆ ಈಗ ಶೋಧನಾ ಸಮುಚಿತ ಅಧಾರವನ್ನು ತೋರಿಸಿ ಅದನ್ನು ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವ.ವನ್ನು ತೋರಿಸಿ ಅದನ್ನು

ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ದಿ.21.05.2012 ರ ವರದಿಯನ್ನು ತೋರಿಸಿ ಅದನ್ನು ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ದಿ.16.07.2012 ರ ಪತ್ರವನ್ನು ತೋರಿಸಿ ಅದನ್ನು ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮಾದರಿ ಮುದ್ರೆ ನಮೂನೆಯನ್ನು ತೋರಿಸಿ ಅದನ್ನು ಗುರುತಿಸಿದ್ದು ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ 4 ಬಾಟಲಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಮು.ಮಾ.1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

8.30 ರಿಂದ 9.40 ರ ವರೆಗೆ ಜಪ್ತಿ ಪಂಚನಾಮೆ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಈಗ ಜಪ್ತಿ ಪಂಚನಾಮೆ ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಅದನ್ನು ನಿಪಿ-6, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾ. ಸವಾಲುಃ- ಆರೋಪಿತರ ಪರ ಬಿ.ಐ.ಎಸ್. ವಕೀಲರಿಂದಃ**

ನಾನು 2012 ರಿಂದ 2013 ರ ವರೆಗೆ ಇಲ್ಲಿ ಕಾರ್ಯನಿರ್ವಹಿಸಿದ್ದೇನೆ ಎಂದರೆ ಸರಿ. ಮುಂದಿನ ತನಿಖೆ ಏನಾಯಿತು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಆಳಂದದಿಂದ ಸುಮಾರು 7.10 ರಿಂದ 7.30 ಗೆ ಇಲ್ಲಿಂದ ಹೊರಟು ಪಡಸಾವಳಗಿ ಗ್ರಾಮಕ್ಕೆ 8.30 ಗಂಟೆಗೆ ಹೋದೇವು. ಗುನ್ನೆ ಸ್ಥಳದ ಚಕುಬಂದಿ ಪೂರ್ವ ಪಶ್ಚಿಮ ಬಯಲು ಜಾಗ, ದಕ್ಷಿಣಕ್ಕೆ ಗ್ರಾಮ ಪಂಚಾಯತಿ ಕಚೇರಿ, ಉತ್ತರಕ್ಕೆ ಅಂಬಾ ಭವಾನಿ ದೇವಸ್ಥಾನ ಇರುತ್ತದೆ. ದೇವಸ್ಥಾನಕ್ಕೆ ಸಾಕಷ್ಟು ಜನ ಹೋಗುವುದು ಬರುವುದು ಮಾಡುತ್ತಾರೆ ಎಂದರೆ ಸರಿ. ದೇವಸ್ಥಾನದಿಂದ ಗುನ್ನೆ ಸ್ಥಳ 25-30 ಅಡಿ ಅಂತರದಲ್ಲಿ ಇದೆ. ನಾವು ನಮ್ಮ ವಾಹನವನ್ನು ದೇವಸ್ಥಾನದ ಹತ್ತಿರವೇ ನಿಲ್ಲಿಸಿದೇವು. ನಮಗೆ ಬಾತ್ಮಿ ಕರೆ ಬಂದಾಗಲೇ ಗುನ್ನೆ ಸ್ಥಳದ ಬಗ್ಗೆ ಹೇಳಿದ್ದರು ಆದ ಕಾರಣ ನೇರವಾಗಿ ಗುನ್ನೆ ಸ್ಥಳಕ್ಕೆ ಹೋದೇವು. ನಾವು ಯಾರನ್ನು ಗುನ್ನೆ ಸ್ಥಳದ ಬಗ್ಗೆ ವಿಚಾರಿಸಲಿಲ್ಲ. ಅಂದಾಜು 8-10 ಜನ ನಮ್ಮನ್ನು ನೋಡಿ ಓಡಿ ಹೋದರು. ನಾವು ಓಡಿ ಹೋದವರನ್ನು ಹಿಡಿಯಲು ಪ್ರಯತ್ನಿಸಿದರೂ ಅವರು ಸಿಕ್ಕಿರಲಿಲ್ಲ. ಆರೋಪಿ ನಮ್ಮನ್ನು ನೋಡಿ ಓಡಲು ಪ್ರಯತ್ನಿಸಲಿಲ್ಲ ಆದರೆ ಕ್ಯಾನಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಿದ್ದನು. ಆರೋಪಿ ಅಂಗವಿಕಲ ಇದ್ದ ಕಾರಣ ಗುಡಿಯ ಮುಂದೆ ಭಿಕ್ಷೆ ಬೇಡಲು ಕುಳಿತಿದ್ದ ಎಂದರೆ ಸಾಕ್ಷಿ ಬಿಕ್ಷೆ ಬೇಡಲು ಕುಳಿತಿರಲಿಲ್ಲ ಎಂದು ಹೇಳುತ್ತಾರೆ. ಆರೋಪಿಗೂ ಆಪಾದನೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ

ಸರಿಯಲ್ಲ. ಕ್ಯಾನಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಮು.ಮಾ.ಗಳು ಈ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡಿರುವ ಬಾಟಲಗಳು ಅಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ.ಸಿ ಆಳಂದ